ಪಡಕೊಂಡು ಸಂಬಳ ನೀಡಲಾಗುತ್ತಿತ್ತು. ಇವರು ಸರಕಾರಿ ಸೇವೆಯನ್ನು ಮಾಡುತ್ತಿರುವುದು ೧೬ ವರ್ಷಗಳಾದರೂ, ಖಾಯಂ ನೇಮಕಾತಿ ಮಾಡಿರುವುದಿಲ್ಲ. ೧೯೮೮ರಲ್ಲಿ ವರ್ಗಾವಣೆ ತಿಂಗಳವರೆಗಿನ ಸಂಬಳವನ್ನು ಆದೇಶ ಸಂಖ್ಯೆ ಇಡಿ—೨೨೭—ಪಿಯುಂಸಿ—೮೮ ಬೆಂಗಳೂರು ದಿನಾಂಕ ೪-೮-೮೭ರಂತೆ ನೀಡಲಾಯಿತು. ನಂತರದ ನಾಲ್ಕು (೪) ತಿಂಗಳ ಸಂಬಳವನ್ನು ತಾಲ್ಲೂಕು ಸಹಾಯಕ ವಿದ್ಯಾಧಿಕಾರಿಗಳ ವ್ಯಾಪ್ತಿಯಲ್ಲಿ ನೀಡಲಾಯಿತು. ಈಗ ಜೂನ್ ತಿಂಗಳಿನಿಂದ ಸೆಪ್ಟೆಂಬರ್ ೧೯೮೮ರವರೆಗಿನ ಸಂಬಳವನ್ನು ಪ್ಲಾನ್ ಸ್ಕೀಂ ಆದುದರಿಂದ ನೀಡಲಾಗಿಲ್ಲ. ಸದ್ರಿ ಅಧ್ಯಾಪಕರುಗಳು ತುಂಬಾ ಕಷ್ಟದಿಂದ ಜೀವನ ನಡೆಸುವ ಪರಿಸ್ಥಿತಿ ಬಂದಿದೆ. ಇವರ ಹುದ್ದೆಯನ್ನು ಖಾಯಂಗೊಳಿಸುವಂತೆಯೂ ಸರಕಾರವನ್ನು ಈ ಹಿಂದೆ ಒತ್ತಾಯಪಡಿಸಲಾಗಿತ್ತು. ಅಲ್ಲದೆ ಜಿಲ್ಲಾಪರಿಷತ್‌ಗೆ ಕೂಡ ಬರೆದುಕೊಂಡಿದ್ದರೂ ಈತನಕ ಕ್ರಮ ಕೈಕೊಂಡಿರುವುದಿಲ್ಲ. ಆದುದರಿಂದ ಇವರ ೪ ತಿಂಗಳ ಸಂಬಳವನ್ನು ನೀಡುವಂತೆ ಮತ್ತು ಇವರ ಹುದ್ದೆಯನ್ನು ಖಾಯಂಗೊಳಿಸುವಂತೆ ಸರಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಸಿದ್ದರಾಮಯ್ಯ.— ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಸೂಳ್ಯ ಮತ್ತು ಕಂದಕ ಕಾಲೋನಿಯ ಶಾಲೆಯೊಂದರಲ್ಲಿ ೨ ತರಗತಿಗಳು ಶಿಕ್ಷಕರ ಹುದ್ದೆಯನ್ನು ತಾತ್ಕಾಲಿಕವಾಗಿ ಸೃಜಿಸಿ ಕಾಲಾವಧಿ ಕಾಲಕ್ಕೆ ಹುದ್ದೆಯ ಸೃಜನೆಯನ್ನು ನವೀಕರಿಸಲಾಗುತ್ತಿದೆ, ಸರ್ಕಾರದ ಆದೇಶ ಸಂಖ್ಯೆ:ಇಡಿ೨೨೭ ಪಿಎಂಸಿ೮೮ ದಿನಾಂಕ ೪-೮-೮೭ರಲ್ಲಿ ಈ ಹುದ್ದೆಗಳನ್ನು ನವೀಕರಿಸಲಾಗಿತ್ತು. ಈ ಬಾರಿಯೂ ಪ್ರಸ್ತಾವನೆ ಬಂದಿರುತ್ತದೆ, ಸದರಿ ಹುದ್ದೆಗಳನ್ನು ಖಾಯಂ ಆಗಿ ಮುಂದುವರಿಸಲು ಪರಿಶೀಲಿಸಲಾಗುತ್ತಿದೆ.

೧೦ ದಕ್ಷಿಣ ಕನ್ನಡ ಜಿಲ್ಲೆಯ ಸಕ್ಕರೆ ಕಾರ್ಖಾನೆಗೆ ಕಬ್ಬು ಒದಗಿಸಿದ ರೈತರಿಗೆ ಹಣ ಪಾವತಿ ಮಾಡಲು ಒತ್ತಾಯ.

ಶ್ರೀ ಬಸವರಾಜ್ (ಬ್ರಹ್ಮಾವರ).— ಮಾನ್ಯ ಅಧ್ಯಕ್ಷರೆ, ಬ್ರಹ್ಮಾವರದಲ್ಲಿರುವ ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆಗೆ ಕಬ್ಬು ಒದಗಿಸಿದ ರೈತರಿಗೆ ಹಣ ಪಾವತಿ ಮಾಡಲು ಸರಕಾರ ಸೂಕ್ತ ನೆರವು ನೀಡಬೇಕು ಎಂದೂ ಕಳೆದ ಅಧಿವೇಶನದಲ್ಲಿ ಸರಕಾರವನ್ನು ಒತ್ತಾಯಿಸಿದಾಗ ಮಾನ್ಯ ಕೈಗಾರಿಕಾ ಸಹಕಾರಿ ಮಂತ್ರಿಗಳಿಂದ 'ಹಣ ಪಾವತಿಗೆ ಶೀಘ್ರ ಕ್ರಮ ಕೈಗೊಳ್ಳಲಾಗುವು'ದೆಂಬ ಆಶ್ವಾಸನೆ ಬಂದಿತ್ತು. ಆದರೆ ಆ ಆಶ್ವಾಸನೆ ಮರೀಚಿಕೆಯಂತೆ ಹಾಗೆಯೇ ಉಳಿದಿದೆ. ಈ ವರ್ಷ ಜಿಲ್ಲೆಯಲ್ಲಿ ಬಹು ದೊಡ್ಡ ಸಂಖ್ಯೆಯಲ್ಲಿ, ಬಹು ವಿಸ್ತಾರವಾದ ಭಾಗದಲ್ಲಿ ರೈತರು ಕಬ್ಬು ಬೆಳೆಸಿದ್ದಾರೆ. ಹಿಂದಿನ ಹಣ ಪಾವತಿಯೇ ಆಗದಿದ್ದಲ್ಲಿ ಅವರಿಗೆಲ್ಲ ನಿರಾಶೆಯೇ ಗತಿ. ಆದ್ದರಿಂದ, ಕಳೆದ ವರ್ಷದ ಬಾಕಿ ಪಾವತಿಗೆ ವಿಶೇಷ ಮಾಡದೆ, ಸರಕಾರವೇ ಕಾರ್ಖಾನೆಗೆ ಮೆದು ಸಾಲ ಒದಗಿಸಿ, ರೈತರ ನೆರವಿಗೆ ಬರಬೇಕು, ಇನ್ನೆರಡು ತಿಂಗಳಲ್ಲಿ ಕಾರ್ಖಾನೆ ಕಬ್ಬು ಅರೆಯುವ ಕಾರ್ಯ ಆರಂಭಿಸಬೇಕಿದ್ದು, ಅದಕ್ಕಾಗಿ ಬೇಕಾದ ಪೂರ್ವ ಸಿದ್ಧತೆಗೂ ಆರ್ಥಿಕ ನೆರವು ಕೂಡಲೇ ನೀಡಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಸಿದ್ದರಾಮಯ್ಯ.— ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ, ಇವರ ವಸೂಲಾತಿಯು ಬಹಳ ಕಡಿಮೆ ಇದ್ದು, ಆರ್ಥಿಕ ತೊಂದರೆಗಳಿರುವುದರಿಂದ ರೈತರಿಂದ ಕೊಂಡ ಕಬ್ಬಿನ ಹಣದ ಪಾವತಿ ಮಾಡಲು ಸಾಧ್ಯವಾಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ರೈತರಿಗೆ ಪಾವತಿ ಮಾಡಲು, ವಿದ್ಯುಚ್ಛಕ್ತಿ ಬಿಲ್ಲು ತುಂಬಲು, ನೌಕರರ ಜೀವವಿಮೆ ಹಣವನ್ನು ಮತ್ತು ಭವಿಷ್ಯ ನಿಧಿಯ ಹಣಗಳನ್ನು ಬೆಗೆತರಿಸಲು ರೂ. ೧೦೦.೦೦ ಲಕ್ಷ ಮೆದು ಸಾಲವನ್ನು ಕೋರಿದ್ದಾರೆ. ಇದೇ ರೀತಿ ಈ ಕಾರ್ಖಾನೆಯು ರೂ. ೧೫೦.೦೦ ಲಕ್ಷಗಳನ್ನು ವಾಣಿಜ್ಯ ಬ್ಯಾಂಕುಗಳು ಹಾಗೂ ಸಹಕಾರಿ ಬ್ಯಾಂಕುಗಳಿಂದ ಸಾಲ ಪಡೆಯಲು ಸರ್ಕಾರದ ಅನುಮತಿಯನ್ನು ಮತ್ತು ಖಾತರಿಯನ್ನು ಕೋರಿದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಡಿ. ಎ. ಚಿನ್ನಪ್ಪ.— ೧೨ ಜನ ಮಂತ್ರಿಗಳ ಪೈಕಿ ಎಲ್ಲದಕ್ಕೂ ಒಬ್ಬರೇ ಸಚಿವರು ಉತ್ತರ ಹೇಳುತ್ತಾ ಇದ್ದಾರೆ.

೨-೩೦ ಪಿ. ಎಂ.

ಶ್ರೀ ಯು. ಭೂಪತಿ.— ಇಲ್ಲಿ ನಾಲ್ಕು ಜನ ಮಂತ್ರಿಗಳಾದರೂ ಇಲ್ಲದೇ ಹೋದರೆ ಹೇಗೆ ? ಒಬ್ಬರು ಮಾತ್ರ ಇದ್ದಾರೆ.

(ಗೊಂದಲ)

ಅಧ್ಯಕ್ಷರು — ೬ ಜನ ಒಟ್ಟಿಗೆ ಎದ್ದರೆ ಹೇಗೆ, ದಯವಿಟ್ಟು ಕೂಡ್ರಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.— ಸದನದ ಬಗ್ಗೆ ಇವರಿಗೆ ಆಸಕ್ತಿ ಇದಯೋ, ಇಲ್ಲವೋ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ವಿದ್ಯಾ ಮಂತ್ರಿಗಳಿಗೆ ಸಂಬಂಧಪಟ್ಟಂತೆ ನೋಟೀಸ್ ಕೊಟ್ಟಿದ್ದಾರೆ. ನಿಯಮ ೩೫೪ ಕೆಳಗೆ ಉತ್ತರವನ್ನು ಮಂತ್ರಿಗಳು ಕೊಡಬೇಕು. ಅವರು ಇಲ್ಲದೇ ಹೋದರೆ ಯಾರ ನೋಟೀಸ್‌ಗೆ ತರುವುದು, ಇಲ್ಲಿ ನಾವು ಹೇಳತಕ್ಕ ವಿಷಯ ಸರ್ಕಾರದ ಗಮನಕ್ಕೆ ಬರಬೇಕು. ಸರ್ಕಾರದವರು ಅದನ್ನು ತಿಳಿದುಕೊಂಡು ಕ್ರಮ ತೆಗೆದುಕೊಳ್ಳಬೇಕು. ಇದರಿಂದ ಜನರಿಗೆ ಪ್ರಯೋಜನವಾಗುತ್ತದೆ. ಆ ದೃಷ್ಟಿಯಿಂದ ನಾವು ಇಲ್ಲಿ ಕೆಲಸ ಮಾಡುತ್ತಿದ್ದೇವೆ. ನಮಗೆ ಬೇರೆ ಕೆಲಸ ಇಲ್ಲವೇ ? ಅವರಿಗೆ ಮಾತ್ರ ಕೆಲಸ ಇದೆಯೇ ? ಇಲ್ಲಿ ಒಬ್ಬರು ಮಂತ್ರಿಗಳು ಸಹ ಇಲ್ಲ.

ಶ್ರೀ ಸಿದ್ಧರಾಮಯ್ಯ.— ನಾನು ಇದ್ದೇನೆ, ನಮಗೆ ಜಾಯಿಂಟ್ ರೆಸ್‌ಪಾನ್ಸಿಬಿಲಿಟಿ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇಲ್ಲಿ ಜಂಟೀ ಜವಾಬ್ದಾರಿಯ ಪ್ರಶ್ನೆ ಬರುವುದಿಲ್ಲ, ನೀವು ಭೀಮಾರಿ ಹಾಕದ ಹೊರತು, ಇವರು ಸರಿ ಹೋಗುವುದಿಲ್ಲ.

ಅಧ್ಯಕ್ಷರು — ಇವತ್ತು ನಿಯಮ ೩೫೪ ಕೆಳಗೆ ೨೨ ನೋಟೀಸ್ ಇಟ್ಟಿದ್ದೇನೆ. ಪ್ರತಿ ದಿನ ೫-೧೦ ಇಡುತ್ತಿದ್ದೆವು. ಇನ್ನೂ ೩೨ ಕೊಟ್ಟರೂ ಇಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಉಪಯೋಗ ಏನಾಯಿತು ?

ಅಧ್ಯಕ್ಷರು.— ನಿಯಮ ೩೫೪ ಕೆಳಗೆ ನೋಟೀಸ್ ಕೊಟ್ಟರೆ, ಸಂಬಂಧಪಟ್ಟ ಮಂತ್ರಿಗೆಳಿಗೆ ಹೋಗುತ್ತೆ, ಅವರಿಂದ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಸಂಬಂಧಪಟ್ಟ ಮಂತ್ರಿಗಳು ಇಲ್ಲದೇ ಹೋದರೆ, ಗೋಡೆಗಳಿಗೆ ಹೇಳುವುದಕ್ಕಾಗುತ್ತದೆಯೇ ? ತಾವು ಹೇಳುವುದು ನಮಗೆ ಅರ್ಥವಾಗುವುದಿಲ್ಲ.

ಅಧ್ಯಕ್ಷರು.— ಮುಖ್ಯಮಂತ್ರಿಗಳಿಗೆ ವಿಷಯ ತಿಳಿಸಿ. ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುವುದಕ್ಕೆ ವ್ಯವಸ್ಥೆ ಮಾಡಿ ಎಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನೀವು ಅವರಿಗೆ ಛೀಮಾರಿ ಹಾಕಬೇಕು.

ಶ್ರೀ ಸಿದ್ಧರಾಮಯ್ಯ.— ಕೆಲವು ಮಂತ್ರಿಗಳು ಮೇಲ್ಮನೆಯಲ್ಲಿ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ೧೩ ಜನ ಮಂತ್ರಿಗಳು ಅಲ್ಲಿಯೇ ಇದ್ದಾರೆಯೇ ?

ಶ್ರೀ ಸಿದ್ಧರಾಮಯ್ಯ.— ಹೌದು.

ಅಧ್ಯಕ್ಷರು.— ಇನ್ನು ಮುಂದೆ ಎಲ್ಲಾ ಮಂತ್ರಿಗಳಿಗೂ ಉತ್ತರ ಕೊಡುವಂತೆ ಹೇಳುತ್ತೇನೆ.

ಶ್ರೀ ಯು. ಭೂಪತಿ.— ಮಂತ್ರಿಗಳು ಎಲ್ಲಿಗೆ ಹೋಗುತ್ತಾರೆಂಬುದು ನಮಗೆ ಗೊತ್ತಾಗಬೇಕು.

ಅಧ್ಯಕ್ಷರು.— ಈ ರೀತಿ ಮಾಡಿದರೆ ದಿನಕ್ಕೆ ೨-೩ ಮಾತ್ರ ಹಾಕುತ್ತೇನೆ.

ಶ್ರೀ ಯು. ಭೂಪತಿ.— ಮಂತ್ರಿಗಳು ಇಲ್ಲದೇ ೫೦ ಇಟ್ಟರೂ ಏನು ಪ್ರಯೋಜನ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. — ೫-೬-೭ ಜನ ಏನಾದರೂ ಆಬ್ಸೆಂಟ್ ಆದರೆ ಒಪ್ಪೋಣ.

ಅಧ್ಯಕ್ಷರು.— ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಸ್ವಾಮಿ, ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು.— ಪಾಯಿಂಟೂ ಇಲ್ಲ, ಆರ್ಡರೂ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ನಿಯಮ ೩೫ರ ಪ್ರಕಾರ ಪಾಯಿಂಟ್ ಇಲ್ಲದೇ ರೈಸ್ ಮಾಡುವುದಕ್ಕೆ ಅವಕಾಶ ಇದೆ. ತಾವು ೨೦–೨೫ಕ್ಕೆ ಅವಕಾಶ ಕೊಟ್ಟಿದ್ದೀರಿ.

ಅಧ್ಯಕ್ಷರು.— ನಾನು ನಿಮಗೆ ಸೌಜನ್ಯ ತೋರಿಸುವುದು, ಸಹಕಾರ ಕೊಡುವುದು ತಪ್ಪಾಗಿದೆ.

ಶ್ರೀ ಯು. ಭೂಪತಿ.— ಏನು ಸ್ವಾಮಿ, ನೀವು ಹೇಳುವುದು.

ಅಧ್ಯಕ್ಷರು.— ನಾನು ಸೌಜನ್ಯದಿಂದ ೩೦—೫೦ ಕೊಟ್ಟರೂ ಇಡುತ್ತೇನೆ.

ಶ್ರೀ ಯು. ಭೂಪತಿ.— ಏನು ಪ್ರಯೋಜನ ?

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.— ಅಧ್ಯಕ್ಷರೆ, ಇವರಿಗೆ ಮಂತ್ರಿಮಂಡಲ ವಿಸ್ತರಣೆ ಮಾಡಲಿಕ್ಕೆ ಆಗಿಲ್ಲ, ಇವರು ಪರಸ್ಪರ ಬಡಿದಾಡಿಕೊಂಡು ಜನರಾ ನಾಯಬುತ್ತಿದ್ದಾರೆ. ಜನತೆಯ ದೃಷ್ಟಿಯಿಂದ ನಮ್ಮ ದೃಷ್ಟಿಯಿಂದ ಈ ಸರ್ಕಾರ ಸತ್ತಿದೆ. ಸರ್ಕಾರ ಇಲ್ಲ. ಇವರಿಗೆ ಜನತೆಯ ಬಗ್ಗೆ ಕಳಕಳಿ ಇಲ್ಲ.

(ಗೊಂದಲ)

ಅಧ್ಯಕ್ಷರು.— ಇಷ್ಟು ಗಲಾಟೆ ಆದರೆ ಯಾರು ಏನು ಹೇಳಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.— ಅಧ್ಯಕ್ಷರೆ, ನಾನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೆ.

ಅಧ್ಯಕ್ಷರು.— ತಮ್ಮ ಪಾಯಿಂಟ್ ಆಫ್ ಆರ್ಡರ್ ಏನು ಹೇಳಿ ?

ಶ್ರೀ ಎಂ. ಎಸ್. ಕೃಷ್ಣನ್.— ಅಧ್ಯಕ್ಷರೆ, ತಾವು ಪಾಯಿಂಟ್ ಆಫ್ ಆರ್ಡರ್‌ಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಅಧ್ಯಕ್ಷರೆ, ಹಲವಾರು ಬಾರಿ ಚರ್ಚೆ ಮಾಡಿದಾಗ ತಾವು ಭರವಸೆ ಕೊಟ್ಟು ನಿಯಮ ೩೫ಕ್ಕೆ ಉತ್ತರಗಳನ್ನು ತರಿಸಿಕೊಡಲಿಕ್ಕೆ ಪ್ರಯತ್ನ ಪಡುತ್ತೇನೆಂದು ಹೇಳಿದ್ದೀರಿ. ಇದು ನಮ್ಮ ಪ್ರೊಸೀಡಿಂಗ್ಸ್‌ನಲ್ಲಿ ಇದೆ. ಆದರೆ ಬರು ಬರುತ್ತಾ ತಾವು ನಿಯಮ ೩೫ರ ಬಗ್ಗೆ ಅಲೋಚನೆ ಮಾಡುತ್ತಿದ್ದೀರಿ, ಆದರೆ ಉತ್ತರಗಳು ಮಾತ್ರ ಬರುತ್ತಿಲ್ಲ. ಮುಖ್ಯಾಲುಭಾಗ ಪ್ರಶ್ನೆಗಳಿಗೆ ಉತ್ತರ ಬರುತ್ತಿಲ್ಲ. ಇಲ್ಲಿ ಯಾರೋ ಒಬ್ಬರು ಮಂತ್ರಿಗಳು ಇರುತ್ತಾರೆ, ಅವರಿಗೆ ಎಲ್ಲಾ ವಿಚಾರ ಏನು ಗೊತ್ತಿರುತ್ತದೆ – ಮಾನ್ಯ ಸಿದ್ದರಾಮಯ್ಯನವರಿಗೆ ಕೆ.ಎಸ್.ಆರ್.ಟಿ.ಸಿ. ಬಗ್ಗೆ ಗೊತ್ತಿರುತ್ತದೆ. ಈಗೆ ಇವರು ನಾನು ಆ ಮಂತ್ರಿಗಳಿಗೆ ಕಳುಹಿಸುತ್ತೇನೆ, ಈ ಮಂತ್ರಿಗಳಿಗೆ ಕಳುಹಿಸುತ್ತೇನೆ ಎಂದು ಹೇಳುತ್ತಾರೆ ಇದರಿಂದ ಏನು ಪ್ರಯೋಜನ – ಅಧ್ಯಕ್ಷರೆ, ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ, ತಾವು ಭರವಸೆ ಕೊಟ್ಟಿದ್ದು ಅದನ್ನು ಈಡೇರಿಸದೇ ಇರುವುದೇ ನನ್ನ ಪಾಯಿಂಟ್ ಆಫ್ ಆರ್ಡರ್.

ಶ್ರೀ ಸಿದ್ದರಾಮಯ್ಯ.— ಅಧ್ಯಕ್ಷರೆ, ಮಾನ್ಯ ಕೃಷ್ಣನ್‌ರವರು ಹೇಳಿದ್ದ ಬಗ್ಗೆ ಉತ್ತರ ಹೇಳಬೇಕು ಅಂದರೆ ಅನೇಕಬಾರಿ ೩೫ರ ವ್ಯಾಪ್ತಿ ಏನು ಎನ್ನುವ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಿದೆ. ತಾವು ಕೂಡ ಸಾಧ್ಯವಾದಮಟ್ಟಿಗೂ ಸರ್ಕಾರದಿಂದ ಉತ್ತರವನ್ನು ತರಿಸಿ ಕೊಡುತ್ತೇನೆಂದು ಹೇಳಿದ್ದೀರಿ. ಇದು ಸರ್ಕಾರದ ಗಮನಕ್ಕೆ ಬಂದತಕ್ಷಣ ಉತ್ತರ ಕೊಡಬೇಕೆಂದು ಇಲ್ಲ. ಅದರ ಬಗ್ಗೆ ಎಷ್ಟು ತ್ವರಿತವಾಗಿ ಕೊಡಲಿಕ್ಕೆ ಸಾಧ್ಯವಾಗುತ್ತದೆ ಅಷ್ಟು ತ್ವರಿತವಾಗಿ ಕೊಡುತ್ತೇವೆ. ಸರ್ಕಾರದ ಗಮನಕ್ಕೆ ತಂದಾಗ ಸಂಬಂಧಪಟ್ಟ ಮಂತ್ರಿಗಳು ಇಲ್ಲದೇ ಇದ್ದಾಗ, ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಕ್ರಮ ತೆಗೆದುಕೊಳ್ಳುವುದಕ್ಕೆ ತಿಳಿಸುತ್ತೇವೆಂದು ಹೇಳುತ್ತೇವೆ. ಆನಂತರ ಸಂಬಂಧಪಟ್ಟ ಮಂತ್ರಿಗಳು ಬೇರೆ ದಿವಸ ಉತ್ತರ ಕೊಡಲಿಕ್ಕೂ ಬರುತ್ತದೆ. ಸಿದ್ದರಾಮಯ್ಯನವರು, ದೇಶಪಾಂಡೆಯವರು ಜಗಜೀವನಿಯವರು ಒಬ್ಬೊಬ್ಬರೇ ಇಲ್ಲಿ ಇರುತ್ತಾರೆ ಎಂದು ಹೇಳುವುದಿಲ್ಲ. ಇಲ್ಲಿ ಸರ್ಕಾರದ ಜಂಟಿ ಜವಾಬ್ದಾರಿ ಇರುತ್ತದೆ. ಮಾನ್ಯ ಸದಸ್ಯರು ಎಷ್ಟು ಜವಾಬ್ದಾರಿಯಿಂದ ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನವನ್ನು ಮಾಡುತ್ತಾರೋ ಅದೇ ರೀತಿ ನಾವು ಸಹ ಸರ್ಕಾರದ

ಗಮನಕ್ಕೆ ತೆಗೆದುಕೊಂಡು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದೇವೆ, ಮಾಡುತ್ತೇವೆ. ಸರ್ಕಾರಕ್ಕೆ ಜವಾಬ್ದಾರಿ ಇಲ್ಲ, ಕಳಕಳಿ ಇಲ್ಲ ಎಂದು ಆರೋಪ ಮಾಡತಕ್ಕದ್ದು ಸರಿಯಲ್ಲ. ಮಾನ್ಯ ಸದಸ್ಯರಿಗೆ ಎಷ್ಟು ಕಳಕಳಿ ಇದೆಯೋ, ಅವರಿಗಿಂತಲೂ ಹೆಚ್ಚು ಕಳಕಳಿ ನಮಗಿದೆ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.— ಅಧ್ಯಕ್ಷರೆ. ಮಾನ್ಯ ಮಂತ್ರಿಗಳು ಈಗಾಗಲೇ ಈ ವಿಷಯದ ಬಗ್ಗೆ ಸ್ಪಷ್ಟಪಡಿಸಿದ್ದಾರೆ ತಮ್ಮ ಆದೇಶದ ಪ್ರಕಾರ ಆದಷ್ಟು ಬಂಟ್ಸಿಗೂ ನಿಯಮ ೩೫ಳಿಕ್ಕೆ ರಿಪ್ಲೈ ಮಾಡಬೇಕು. ರೂಲ್ ನೋಡಿದಾಗ ಸರ್ಕಾರ ತಕ್ಷಣ ರಿಪ್ಲೈ ಕೊಡಬೇಕೆಂದು ಇಲ್ಲ, ನಂತರ ರಿಪ್ಲೈ ಕಳುಹಿಸಿಕೊಡಬಹುದು.

(ಗೊಂದಲ)

ಶ್ರೀ ಪಟಮಕ್ಕಿ ರತ್ನಾಕರ್.— ಅಧ್ಯಕ್ಷರೆ,...

ಅಧ್ಯಕ್ಷರು.— ಈಗ ತಾವೆಲ್ಲಾ ಮಾತನಾಡಿದ್ದರೆ ರೆಕಾರ್ಡ್‌ಗೆ ಹೋಗುವುದಿಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಈಗ ನಾನು ದೇಶಪಾಂಡೆಯವರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಏನು ಹೇಳುತ್ತಾರೆ ಕೇಳೋಣ.

(ಗೊಂದಲ)

ಶ್ರೀ ಪಟಮಕ್ಕಿ ರತ್ನಾಕರ್.— ಅಧ್ಯಕ್ಷರೆ,...

ಅಧ್ಯಕ್ಷರು.— ತಮಗೂ ಅವಕಾಶ ಕೊಡುತ್ತೇನೆ, ದಯವಿಟ್ಟು ಈಗ ಕುಳಿತುಕೊಳ್ಳಿ.

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ತಮ್ಮ ಆದೇಶವಿದೆ, ಅದರಂತೆ ನಾವು ಉತ್ತರವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನಾವು ಸಹಕಾರವನ್ನು ಕೊಡುವುದಕ್ಕೂ ಸಿದ್ಧ, ಅದೇ ರೀತಿ ಸಹಕಾರವನ್ನು ತೆಗೆದುಕೊಳ್ಳುವುದಕ್ಕೂ ಸಿದ್ಧ. ಇನ್ನು ಮುಂದೆ ನಿಯಮ ೩೫ಳಿಕ್ಕೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಉತ್ತರ ಕೊಡುತ್ತೇವೆಂದು ಹೇಳಬಯಸುತ್ತೇನೆ. ಮತ್ತೊಂದು ವಿಚಾರ ಹೇಳುವುದಾದರೆ, ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಈ ಸರ್ಕಾರ ಸತ್ತು ಹೋಗಿದೆ ಅವರ ಪಕ್ಷದಲ್ಲಿ ಜಗಳ ಇದೆ ಎಂದು ಹೇಳಿದರು. ಸ್ವಾಮಿ, ಮಾನ್ಯ ಸದಸ್ಯರು ಅಂಥ ಭಾಷೆಯನ್ನು ಉಪಯೋಗ ಮಾಡಬಾರದು. ನಾವು ಪ್ರಾಮಾಣಿಕವಾಗಿ ಉತ್ತರ ಕೊಡುತ್ತೇವೆ. ಮಾನ್ಯ ಸದಸ್ಯರಿಗೂ ಜವಾಬ್ದಾರಿ ಇದೆ. ಅವರು ಜವಾಬ್ದಾರಿಯಿಂದ ಮಾತನಾಡಬೇಕು. ನಮ್ಮ ಸರ್ಕಾರವೇನೂ ಸತ್ತಿಲ್ಲ. ನಮ್ಮಲ್ಲಿ ಯಾವುದೇ ಜಗಳವೂ ಇಲ್ಲ.

ಶ್ರೀ ಬಿ ಎಸ್. ಯಡಿಯೂರಪ್ಪ.—ಮಾನ್ಯ ಸಭಾಧ್ಯರೆ,.....

ಅಧ್ಯಕ್ಷರು.—ನಿಮ್ಮ ಕ್ರಿಯಾಲೋಪವನ್ನು ತಳ್ಳಿಹಾಕಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ಹೇಳುತ್ತಿದ್ದೇನೆ. ಸಾರ್ವಜನಿಕರ ಹಿತದೃಷ್ಟಿಯಿಂದ ಈ ಸರ್ಕಾರ.. ...

ಅಧ್ಯಕ್ಷರು.—ಯಡಿಯೂರಪ್ಪನವರೇ, ಇದರ ಮೇಲೆ ನಿಮ್ಮ ಭಾಷಣ ಬೇಕಾಗಿಲ್ಲ ನಿಮಗೆ ಉತ್ತರ ಬೇಕೋ ಅಥವಾ ಹೊರಗೆ ಹೋಗುತ್ತೀರೋ ?

ಶ್ರೀ ಬಿ.ಎಸ್. ಯಡಿಯೂರಪ್ಪ.—ಈಗಿನ ಮಂತ್ರಿಮಂಡಲದಲ್ಲಿ ಕೆಲವರಿಗೆ ಮಾತ್ರ ಇಟ್ಟು ಕೊಂಡು ಕೆಲವು ಪೋರ್ಟ್‌ಫೋಲಿಯೋಗಳನ್ನು ಅವರಿಗೆ ಕೊಟ್ಟಿದ್ದಾರೆ. ಮಂತ್ರಿಮಂಡಲವನ್ನು ವಿಸ್ತರಣೆ ಮಾಡಿಂವ ಕೆಲಸ ಜನರ ಹಿತದೃಷ್ಟಿಯಿಂದ ಆಗಬೇಕಾಗಿದೆ. ಆದ್ದರಿಂದ ಮಂತ್ರಿಮಂಡಲವನ್ನು ವಿಸ್ತರಣೆ ಮಾಡಿ ಪೋರ್ಟ್‌ಫೋಲಿಯೋಗಳನ್ನು ಹಂಚಬೇಕು. ನಮ್ಮ ಪ್ರಶ್ನೆಗಳಿಗೆ ಉತ್ತರ ಕೊಡದಿದ್ದರೆ ಫಾಲೋಆಪ್ ಆಗುವುದಿಲ್ಲ, ಇದನ್ನು ಕೇಳತಕ್ಕ ಹಕ್ಕು ನನಗಿದೆ. ನೀವು ಜನತೆಯನ್ನು ಮರೆಯುತ್ತಿದ್ದೀರೆಂದು ಈಗಲೂ ಹೇಳುತ್ತೇನೆ ಮುಂದೆಯೂ ಹೇಳುತ್ತೇನೆ. ನೀವು ನಿಮ್ಮ ಮಂತ್ರಿ ಮಂಡಲವನ್ನು ಬೇಗ ವಿಸ್ತರಣೆ ಮಾಡಿ, ಇಲ್ಲದಿದ್ದರೆ ಇರತಕ್ಕ ಮಂತ್ರಿಗಳಿಗೆ ಜವಾಬ್ದಾರಿಯನ್ನು ಕೊಟ್ಟು ನಮ್ಮ ಪ್ರಶ್ನೆಗಳಿಗೆ ಉತ್ತರ ಕೊಡಿ

ಶ್ರೀ ಯು. ಭೂಪತಿ —ಮಾನ್ಯ ಅಧ್ಯಕ್ಷರೆ, ನಿಯಮ ೩೩ಳಿರ ಬಗ್ಗೆ ಅವರಿಂದ ನಮಗೆ ಒಂದು ಉಪನ್ಯಾಸವನ್ನೇ ಕೊಡಿಸಿದಿರಿ. ನಿಯಮ ೩೩ಳಿರ ಇತಿಮಿತಿ ನಮಗೆ ಗೊತ್ತಿದೆ. ನಿಯಮ ೩೩ಳಿರ ಪ್ರೊವಿಷನ್ ನಮಗೆ ಗೊತ್ತಿದೆ. ನಮ್ಮ ವಿನಂತಿ ಏನೆಂದರೆ, ನಾವು ಯಾವುದಾದರೂ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದಾಗ ಸಂಬಂಧಪಟ್ಟ ಮಂತ್ರಿಗಳಿದ್ದರೆ ಒಳ್ಳೆಯದು. ಏಕೆಂದರೆ ಒಂದು ವೇಳೆ ಅವರ ಅಧಿಕಾರಿಗಳಿಂದ ಇನ್‌ಫರ್ಮೇಷನ್ ಬಂದಿದ್ದರೂ ಪಾಲಿಸಿ ಮ್ಯಾಟರ್ ಆದರೆ ಅದನ್ನು ಹೇಳುವುದಕ್ಕೆ ಅವರಿಗೆ ಅನುಕೂಲವಾಗುತ್ತದೆ. ಮಂತ್ರಿಗಳಿಗೂ ಉತ್ತರ ಕೊಡಲು ಅನುಕೂಲವಾಗುತ್ತದೆ. ಆದರೆ ೧೨ ಜನ ಮಂತ್ರಿಗಳಲ್ಲಿ ಒಬ್ಬರು ಮಾತ್ರ ವಿಧಾನ ಸಭೆಯಲ್ಲಿ ಕೂತು ನಾವು ಕೇಳಿದ್ದಕ್ಕೆಲ್ಲಾ ಉತ್ತರ ತರಿಸುತ್ತೇನೆ. ಉತ್ತರ ತರಿಸುತ್ತೇನೆಂದು ಹೇಳುವುದಾದರೆ ನಾವೇನು ಪೈಮರಿ ಸ್ಕೂಲ್ ಹುಡುಗರೇ? ಈ ನಿಯಮ ೩೩ಳಿರನ್ನು ಓದುವುದಕ್ಕೆ ? ನಾವು ಏತಕ್ಕೆ ಹೇಳುತ್ತಿದ್ದೇವೆಂದರೆ, ನೀವು ಭರವಸೆಯನ್ನು ನಮಗೆ ಕೊಡುತ್ತೀರಿ ಆ ಭರವಸೆ ಕೂಡ ಮಾನ್ಯ ಮಂತ್ರಿಗಳು ಕೊಡುವ ರವಸೆಯ ರೀತಿ ಆಗಬಾರದು. ದಯವಿಟ್ಟು ನಮಗೆ ಉತ್ತರವನ್ನು ತರಿಸಿಕೊಟ್ಟರೆ ನಾವು ನಿಮ್ಮನ್ನು ಉಪ್ಪಿಕೊಳ್ಳುತ್ತೇವೆ.

ಅಧ್ಯಕ್ಷರು. — ಆಗಲಿ ಕೂತುಕೊಳ್ಳಿ

ದಕ್ಷಿಣ ಕನ್ನಡ ಜಿಲ್ಲೆಯ ಅನುದಾನಿತ ಶಾಲೆಗಳಲ್ಲಿ ಅಧ್ಯಾಪಕರ ನೇಮಕ.

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ): —ಮಾನ್ಯ ಅಧ್ಯಕ್ಷರೇ. ದಕ್ಷಿಣ ಕನ್ನಡ ಜಿಲ್ಲೆಯ ಶಿಕ್ಷಣಕರಂಗದಲ್ಲಿ ಖಾಸಗಿ ವಿದ್ಯಾ ಸಂಸ್ಥೆಗಳ ಪಾತ್ರ ಬಹಳ ಹಿರಿದು. ಉನ್ನತ ಆದರ್ಶದ ಅನೇಕ ಸಂಸ್ಥೆಗಳು ಉತ್ತಮ ಪರಂಪರೆ ಸಾಧಿಸಿವೆ. ಆದರೆ ಈಚಿನ ಸರ್ಕಾರದ ಧೋರಣೆಯಂತೆ ಅನುದಾನಿತ ಶಾಲೆಗಳಲ್ಲಿ ನಿಧನ, ನಿವೃತ್ತಿ, ರಾಜೀನಾಮೆ ಹಾಗೂ ವರ್ಗಾವಣೆಯಿಂದಾಗಿ ಖಾಲಿಬಿದ್ದ ಶಿಕ್ಷಕರ ಸ್ಥಾನ ತುಂಬಿಸಬಾರದೆಂದು ಆದೇಶವಿದ್ದು, ಇದರಿಂದ ಶಾಲೆಗಳ ಕಾರ್ಯನಿರ್ವಹಣೆಗೆ ತುಂಬಾ ತೊಂದರೆ ಯಾಗುತ್ತಿದೆ. ಕಾರ್ಕಳ ತಾಲ್ಲೂಕಿನ ಅತ್ತೂರು ಹೈಸ್ಕೂಲಿನ ಸಹಾಯಕ ಅಧ್ಯಾಪಕರನ್ನು ಬಡ್ತಿಗೊಳಿಸಿ ಕೂಳೂರು ಹೈಸ್ಕೂಲಿಗೆ ಮುಖ್ಯೋಪಾಧ್ಯಾಯರನ್ನಾಗಿ ನೇಮಿಸಲಾಯಿತು. ಈ ವರ್ಗಾವಣೆಯನ್ನು ವಿದ್ಯಾ ಇಲಾಖೆ ಅನುಮೋದಿಸಿದರೂ, ಖಾಲಿ ಆದ ಸ್ಥಾನಕ್ಕೆ ನಿಯಮಗಳ ಪ್ರಕಾರ ನೇಮಕ ಮಾಡಿದಾಗ ಸಮಸ್ಯೆ ಆಗಲಿಲ್ಲ. ಕಾಕೂಡೆ ಆದರ್ಶ ಪ್ರೌಢಶಾಲೆಯಲ್ಲೂ ಹೀಗೆಯೇ ಆಗಿದೆ. ಕುಂದಾಪುರ ತಾಲ್ಲೂಕಿನ ಬರೆ ಗುಂಡಿ, ಬ್ರಾಹ್ಮಿದುರ್ಗಾಪರಮೇಶ್ವರಿ ಕಿರಿಯ ಪ್ರಾಥಮಿಕ ಶಾಲೆಯ ಏಕೋಪಾಧ್ಯಾಯರು ನಿವೃತ್ತರಾದಾಗ, ಎಲ್ಲ ನಿಯಮಗಳನ್ನೂ ಅನುಸರಿಸಿ ಹರಿಜನ ಅಧ್ಯಾಪಕರೊಬ್ಬರನ್ನು ನೇಮಕ ಮಾಡಿದರೂ ಮಂಜೂರಾತಿ ನೀಡಿಲ್ಲ. ಶಾಲೆ ಮುಚ್ಚಬೇಕೆಂದು ಸರ್ಕಾರದ ಅರ್ಥವೇ? ಶಾಲೆಗೆ ಸೇರಿದ ಮಕ್ಕಳ ಗತಿ ಏನು ? ಶಿಕ್ಷಣ ಇಲಾಖೆಯ ಆದೇಶ ದಿನಾಂಕ ೧೧-೯-೮೭ರಂತೆ ಖಾಲಿ ಬೀಳುವ ಬೋಧಕರ ಹುದ್ದೆಗಳನ್ನು ತುಂಬ ಬಹುದು ಎಂದು ತಿಳಿಸಿದ್ದರೂ. ಇನ್ನೊಂದು ಸುತ್ತೋಲೆ ದಿನಾಂಕ ೪-೧೦-೮೮ರಂದು ಹೊರಡಿಸಿ ಖಾಲಿಬಿದ್ದ ಹುದ್ದೆ ತುಂಬಲು ಆರ್ಥಿಕ ಇಲಾಖೆಯ ಪೂರ್ವಭಾವಿ ಅನುಮತಿ ಬೇಕೆಂದು ಹೇಳಿರುವುದು ತೀರಾ ದುರ್ದೈವ. ಖಾಲಿ ಇರುವ ಎಲ್ಲಾ ಹುದ್ದೆ ತುಂಬಲು ಅನುಮತಿ ಕೂಡಲೇ ನೀಡಬೇಕು. ನಿಯಮದಂತೆ ಮಾಡಲಾದ ನೇಮಕಗಳಿಗೆ ಅಂಗೀಕಾರ ಕೊಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ಶಿಕ್ಷಣ ಸಚಿವರು) — ಮಾನ್ಯ ಅಧ್ಯಕ್ಷರೆ. ಸರ್ಕಾರದ ಆರ್ಥಿಕ ವಿಂತವ್ಯಯ ಆದೇಶವಿರುವುದರಿಂದ ದಿನಾಂಕ ೧೦-೧೧-೮೭ರಂದು ಬೋಧಕ ವರ್ಗದ ಶಿಕ್ಷಕರನ್ನು ಅನುದಾನಿತ ಶಾಲೆಗಳಲ್ಲಿ ಸರ್ಕಾರದ ಪೂರ್ವಾನುಮತಿ ಇಲ್ಲದೆ ನೇಮಕಾತಿಯನ್ನು ಮಾಡುವುದನ್ನು ಅನುಮೋದಿಸಲು ಬರುವುದಿಲ್ಲ. ಇದರ ಬಗ್ಗೆ ಆಡಳಿತ ವರ್ಗದಿಂದ ನೇಮಕಾತಿಯ ಪ್ರಸ್ತಾವನೆ ಸರ್ಕಾರಕ್ಕೆ ಬಂದರೆ ನಿಯಮಾನುಸಾರ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.